# ಅಧಿಕಾರದ ಗದ್ದುಗೆಯಲ್ಲಿ ತಾರೆಯರು



ದಿ.ಎಂ.ಜಿ.ರಾಮಚಂದ್ರನ್



**2018ರ ಚುನಾವಣೆಯಲ್ಲಿ ಕನ್ನಡದ ಬಹಳಷ್ಟು ತಾರೆಯರು ರಾಜಕೀಯದ ಧೂಳಿನಲ್ಲಿ ಮುಳುಗೇಳುವುದು ಖಚಿತ. ಆದರೆ ರಾಜಕೀಯ ಸಿದ್ಧಾಂತಗಳ ಗಂಧಗಾಳಿಯೂ ಇಲ್ಲದೆ, ಕೇವಲ ಬೆಳ್ಳಿತೆರೆಯ ಜನಪ್ರಿಯತೆಯನ್ನೇ ನಂಬಿ ಇವರು ರಾಜಕೀಯಕ್ಕೆ ಬಂದರೆ ಜನರಿಗೆ ಏನಾದರೂ ಉಪಯೋಗ ಆಗಬಹುದೆ?**

★ **ಎನ್.ಎಸ್. ಶಂಕರ್**



ದಿ.ಎನ್.ಟಿ.ರಾಮರಾವ್

ಅಮೆರಿಕಾ ಅಧ್ಯಕ್ಷನಾಗಿದ್ದ ರೊನಾಲ್ಡ್ ರೇಗನ್, ಜಗತ್ತಿನ ಇತಿಹಾಸದಲ್ಲಿ ಉನ್ನತ ರಾಜಕೀಯ ಅಧಿಕಾರ ಹಿಡಿದ ಮೊಟ್ಟಮೊದಲ ಸಿನಿಮಾ ನಟ. ಅವನಾದ ಮೇಲೆ, ರಾಜಕೀಯವಾಗಿ ಉನ್ನತ ಹುದ್ದೆಗೇರಿದ ಚಿತ್ರರಂಗದ ಎರಡನೇ ವ್ಯಕ್ತಿಯೆಂದರೆ ತಮಿಳುನಾಡಿನ ಮುಖ್ಯಮಂತ್ರಿ ಎಂ.ಜಿ. ರಾಮಚಂದ್ರನ್ ಅಂತೆ!

ಎಂಜಿಆರ್ ಆದ ಮೇಲಂತೂ ಭಾರತದಲ್ಲಿ ಅನೇಕ ಸಿನಿಮಾ ಮಂದಿ ಅಧಿಕಾರದ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಈ ಕ್ಷಣಕ್ಕೂ ಎಷ್ಟೋ ಜನ ಸಕ್ರಿಯ ರಾಜಕಾರಣದಲ್ಲಿ ನೆಲೆಯೂರಿಯೂ ಇದ್ದಾರೆ. ಕರ್ನಾಟಕದಲ್ಲೂ ಅನಂತ್‌ನಾಗ್, ಅಂಬರೀಷ್, ರಮ್ಯ, ಉಮಾಶ್ರೀ, ಜಗ್ಗೇಶ್ ಮೊದಲುಗೊಂಡು ಸಾಕಷ್ಟು ಜನ ರಾಜಕಾರಣದಲ್ಲಿ ತಮ್ಮ ಅದೃಷ್ಟ ಪರೀಕ್ಷೆಗಿಳಿದ ಹಲವಾರು ಉದಾಹರಣೆಗಳಿವೆ. ಇದೀಗ 'ರಿಯಲ್ ಸ್ಟಾರ್' ಉಪೇಂದ್ರ ಕೂಡ 'ಪ್ರಜಾಕೀಯ'ದ (ತಮ್ಮದು ರಾಜಕೀಯ ಅಲ್ಲ ಎಂದು ಅವರೇ ಹೇಳಿದ್ದಾರೆ) ಪ್ರಯೋಗಕ್ಕೆ ಮುಂದಾಗಿದ್ದಾರೆ.

ಪ್ರಶ್ನೆಯೆಂದರೆ– ಇವರೆಲ್ಲರ ರಾಜಕೀಯ ಆಕಾಂಕ್ಷೆಗಳು– ರಾಗಿ ಬೀಸುವ ಶ್ರೀಸಾಮಾನ್ಯನ ಬವಣೆಯನ್ನು ನೀಗಿಸುವ ನಿಟ್ಟಿನಲ್ಲಿವೆಯೇ? ಹಾಗೆ ಜನಜೀವನದ ಚಹರೆಯನ್ನು ಬದಲಿಸಲೆಂದೇ ಬಂದಿದ್ದಾಗಿ ಹೇಳಿಕೊಂಡ ಎನ್.ಟಿ. ರಾಮರಾವ್ ಉದಾಹರಣೆಯನ್ನು ನಾವಿನ್ನೂ ಮರೆತಿಲ್ಲ. ಹಾಗೆ ನೋಡಿದರೆ ಸಿನಿಮಾ ಮತ್ತು ರಾಜಕೀಯಗಳ ನಂಟನ್ನು ಪರಿಶೀಲಿಸಲು ನಮಗೆ ಎನ್‌ಟಿಆರ್ ಮತ್ತು ಎಂಜಿಆರ್‌ಗಿಂತ ಸೂಕ್ತ ಉದಾಹರಣೆ ಬೇಕಿಲ್ಲ.

ರಾಮನಾಗಿ, ಕೃಷ್ಣನಾಗಿ ಆಂಧ್ರ ದೇಶಿಗರ ಭಕ್ತಿಸದೃಶ ಅಭಿಮಾನವನ್ನು ಸಂಪಾದಿಸಿದ್ದ ನಂದಮೂರಿ ತಾರಕ ರಾಮರಾವ್– ಕಾಂಗ್ರೆಸ್ಸಿನ ಹೈಕಮಾಂಡ್ ಸಂಸ್ಕೃತಿಯ ವಿರುದ್ಧ ತೆಲುಗರ